**೧. ಸಮಯ ನಿರ್ವಹಣೆ:** ನಲವತ್ತೈದು ನಿಮಿಷಗಳಲ್ಲಿ ಆರು ಪ್ರಶ್ನೆಗಳಿಗೆ ಉತ್ತರ ಬರೆಯಬೇಕು ಎಂದಿಟ್ಟುಕೊಳ್ಳಿ. ಆಗ ಪ್ರತಿಯೊಂದು ಪ್ರಶ್ನೆಗೆ ಐದು ನಿಮಿಷ ಮಾತ್ರ ತೆಗೆದುಕೊಳ್ಳಿ. ಯಾವುದಾದರೂ ಒಂದು ಪ್ರಶ್ನೆ ಅರ್ಧ ಆಗಿದ್ದರೂ ಕೂಡ, ಐದು ನಿಮಿಷ ಕಳೆದ ನಂತರ ಮುಂದಿನ ಪ್ರಶ್ನೆಗೆ ಹೋಗಿ. ಹೀಗೆ ನೀವು ಮೂವತ್ತು ನಿಮಿಷಗಳಲ್ಲಿ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಬರೆಯುತ್ತೀರಿ. ನಿಮಗೆ ಇನ್ನೂ ಹದಿನೈದು ನಿಮಿಷಗಳು ಇರುತ್ತವೆ. ಆ ಸಮಯದಲ್ಲಿ ಅರ್ಧ ಬಿಟ್ಟ ಅಥವಾ ಸರಿಯಾಗಿ ಉತ್ತರ ಬರೆಯದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೪೫ ನಿಮಿಷದಲ್ಲಿ ಸಂಪೂರ್ಣಮಾಡಿದ ಮೂರು ಉತ್ತರಗಳಿಗಿಂತ, ಅದೇ ಸಮಯದಲ್ಲಿ ಬರೆದ ಅಸಂಪೂರ್ಣ ೬ ಉತ್ತರಗಳ ಮೂಲಕ ನಿಮಗೆ ಹೆಚ್ಚು ಅಂಕಗಳು ಬರುತ್ತವೆ. ಹೀಗೆ ಸಮಯ ನಿರ್ವಹಣೆ ಮಾಡಿಕೊಳ್ಳುವುದು ಅತ್ಯಂತ ಮುಖ್ಯವಾದುದು.

**೨. ಎಲ್ಲಾ ಪ್ರಶ್ನೆಗಳನ್ನೂ ಒಮ್ಮೆ ಓದಿಕೊಳ್ಳಿ:** ಹೀಗೆ ಮಾಡಿದಾಗ, ಕೆಲವು ಪ್ರಶ್ನೆಗಳಿಗೆ ಒಡನೆ ಉತ್ತರಗಳು ಹೊಳೆಯುತ್ತವೆ. ಆ ಸಮಯಕ್ಕೆ ಬಂದ ಮುಖ್ಯ ಪದಗಳನ್ನು, ಅಂಶಗಳನ್ನು ಮನಸ್ಸಿನಲ್ಲಿಯೇ ಪಟ್ಟಿಮಾಡಿಕೊಳ್ಳಿ ಅಥವಾ ಸಾಧ್ಯವಾದರೆ, ಒಂದು ಕಡೆ ಗುರುತು ಹಾಕಿಕೊಳ್ಳಿ. ಇಲ್ಲದಿದ್ದರೆ ಮುಂದೆ, ಉತ್ತರ ಬರೆಯುವಾಗ, ಭಯ ಅಥವಾ ಕಳವಳದಿಂದ ಅವುಗಳನ್ನು ನೀವು ಮರೆಯುವ ಸಂಭವ ಇರುತ್ತದೆ.

**೩. ಯಾವುದೇ ಪ್ರಶ್ನೆಗೆ ಉತ್ತರಿಸುವ ಮೊದಲು, ಪ್ರಶ್ನೆ ನಿಮ್ಮಿಂದ ಏನನ್ನು ಬಯಸುತ್ತದೆ ಎಂಬುದನ್ನು ಗಮನವಿಟ್ಟು ನೋಡಿಕೊಳ್ಳಿ:** ಪ್ರಶ್ನೆಯನ್ನು ಸಿದ್ಧಪಡಿಸಿದವರು, ನೀವು ಯಾವುದೋ ಒಂದು ನಿರ್ದಿಷ್ಟ ವಿಧಾನದಲ್ಲಿ ಉತ್ತರಿಸಬೇಕು ಎಂದು ಬಯಸುತ್ತಾರೆ. ಅದನ್ನು ಸರಿಯಾಗಿ ನೋಡಿಕೊಂಡು ಉತ್ತರಿಸುವುದು ಒಳ್ಳೆಯದು. ಉದಾಹರಣೆಗೆ ಯಾವುದೋ ಒಂದು ವೈಜ್ಞಾನಿಕ ನಿಯಮದ ಪ್ರಾಯೋಗಿಕ ಅಂಶವನ್ನು ಕೇಳಿರುತ್ತಾರೆ ಎಂದು ತಿಳಿದುಕೊಳ್ಳಿ. ಆ ಅಂಶಕ್ಕೆ ಬದಲಾಗಿ ನೀವು ಸಿದ್ಧಾಂತ ವನ್ನು ವಿವರಿಸಿ ಬರೆದರೆ ಅದು ತಪ್ಪಾಗುತ್ತಾದೆ. ಆದ್ದರಿಂದ ಪ್ರಶ್ನೆಯನ್ನು ಚೆನ್ನಾಗಿ ಓದಿಕೊಂಡು, ಮನಸ್ಸಿನಲ್ಲಿಯೇ ವಿಶ್ಲೇಷಣೆ ಮಾಡಿಕೊಂಡು, ಸೂಕ್ತವಾದ ಉತ್ತರವನ್ನು ಬರೆಯುವುದು ಅವಶ್ಯ.

**೪. ನಿಮ್ಮ ಉತ್ತರಗಳ ನಕ್ಷೆಯನ್ನು ಹಾಕಿಕೊಳ್ಳಿ:** ಹೇಗೋ ಸರಿಯುತ್ತರ ಹೊರಹೊಮ್ಮುತ್ತದೆ ಎಂಬ ನಂಬಿಕೆಯಿಂದ ಪೂರ್ವಯೋಜನೆಯಿಲ್ಲದೆ ಬರೆಯಬಾರದು. ನೀವು ಯೋಜನಾಬದ್ಧವಾಗಿ, ತರ್ಕಬದ್ಧವಾಗಿ, ಒಂದಾದ ಮೇಲೊಂದರಂತೆ ವಿಷಯಾಂಶಗಳನ್ನು, ಯಾವುದೇ ಸಂದೇಹಕ್ಕೆ ಎಡೆಯಿಲ್ಲದೆ ನಿರೂಪಿಸಿದರೆ, ಅದು ಪರೀಕ್ಷಕರ ಗಮನವನ್ನು ಸೆಳೆಯುತ್ತದೆ. ಮುಖ್ಯಾಂಶಗಳನ್ನು ಸಂಖ್ಯೆ ಹಾಕಿಕೊಂಡು, ಚಿಕ್ಕ ಚಿಕ್ಕ ಪ್ಯಾರಾಗಳಲ್ಲಿ ಬರೆಯುವುದು, ಮುಖ್ಯಾಂಶಗಳು, ಮುಖ್ಯವಾದ ತಾಂತ್ರಿಕ ಪದಗಳು, ಹೆಸರುಗಳು, ಊರುಗಳು, ದಿನಾಂಕಗಳು ಮುಂತಾದವುಗಳ ಕೆಳಗೆ ಗೆರೆ ಹಾಕುವುದು – ಇವು ನಿಮ್ಮ ಬರಹದ ಅಂದವನ್ನು ಹೆಚ್ಚಿಸುತ್ತವೆ. ಹಾಗೆಯೇ ಎಷ್ಟು ಬೇಕೋ ಅಷ್ಟನ್ನು ಮಾತ್ರ, ಸಂಕ್ಷಿಪ್ತವಾಗಿ ಬರೆಯುವುದನ್ನು ಅಭ್ಯಾಸ ಮಾಡಿಕೊಳ್ಳಿ. ಅನಾವಶ್ಯಕವಾಗಿ ಹೆಚ್ಚು ಬರೆದರೆ, ಹೆಚ್ಚು ಹೆಚ್ಚು ತಪ್ಪುಗಳಾಗುವ ಸಂಭವ ಇರುತ್ತದೆ. ಇದರಿಂದ ಅಂಕಗಳು ಕಡಮೆಯಾಗುತ್ತವೆ.

**೫. ನಿಮ್ಮ ಉತ್ತರಗಳಿಗೆ ಮೊದಲಿಗೆ ಸಣ್ಣದೊಂದು ಪರಿಚಯ ಮತ್ತು ಕಡೆಯಲ್ಲಿ ಸಂಕ್ಷಿಪ್ತವಾಗಿ ಸಾರಾಂಶವೊಂದನ್ನು ಬರೆಯಲು ಮರೆಯಬೇಡಿ:** ಮೊದಲಿಗೆ ನೀವು ಬರೆಯಲು ಹೊರಟಿರುವ ವಿಷಯದ ಮುಖ್ಯಾಂಶಗಳ ಸಂಕ್ಷಿಪ್ತ ವಿವರಣೆಯನ್ನು ಪರಿಚಯದ ರೂಪದಲ್ಲಿ ಬರೆಯಬೇಕು. ಕಡೆಯಲ್ಲಿ ನೀವು ಈಗಾಗಲೇ ಬರೆದ ವಿಷಯದ ಸೂಕ್ತ ಸಾರಾಂಶವನ್ನು ನೀಡಬೇಕು. ಹೀಗೆ ಉತ್ತಮವಾದ ಪ್ರಾರಂಭ ಮತ್ತು ಅಂತ್ಯವುಳ್ಳ ಉತ್ತರವು ಪರೀಕ್ಷಕರಿಗೆ ತೃಪ್ತಿದಾಯಕವಾಗಿರುತ್ತದೆ.

**೬. ಪರೀಕ್ಷೆಯ ಅವಧಿಯ ಕಡೆಯಲ್ಲಿ ನೀವು ಬರೆದ ಉತ್ತರಗಳನ್ನು ಮತ್ತೊಮ್ಮೆ ಪುನರ್ವಿಮರ್ಶಿಸಿಕೊಳ್ಳಿ:** ಉತ್ತರವನ್ನು ಬರೆಯುವಾಗ ಕೆಳಗಿನ ತಪ್ಪುಗಳು ಸಂಭವಿಸಬಹುದು: ೧. ಕಾಗುಣಿತದ ತಪ್ಪುಗಳು ೨. ಇಡೀ ಪದಗಳನ್ನು ಅಥವಾ ಪದಪುಂಜಗಳನ್ನು ಕೈಬಿಟ್ಟಿರುವುದು ೩. ಪ್ರಶ್ನೆಯ ಯಾವುದೋ ಒಂದು ಭಾಗವನ್ನೇ ಉತ್ತರಿಸದೆ ಬಿಟ್ಟಿರುವುದು ೪. ದಿನಾಂಕ, ಹೆಸರು, ಅಂಕಿ ಅಂಶಗಳನ್ನು ಅವಸರದಲ್ಲಿ ತಪ್ಪಾಗಿ ಬರೆದಿರುವುದು ಇತ್ಯಾದಿ. ಆದ್ದರಿಂದ ಉತ್ತರಗಳನ್ನು ಬರೆದ ಮೇಲೆ ಮತ್ತೊಮ್ಮೆ ಇಡೀ ಉತ್ತರಪತ್ರಿಕೆಯನ್ನು ಓದಿ ತಿದ್ದುವುದು ಒಳ್ಳೆಯದು.

**೭. ಸಾಧ್ಯವಾದಷ್ಟು ಸರಿಯಾದ ಉತ್ತರಕ್ಕೆ ಸಮೀಪವಾದ ಉತ್ತರಗಳನ್ನು ಬರೆಯಲು ಯತ್ನಿಸಿ :** ನಿಮಗೆ ಸಂದೇಹವಿರುವಾಗ, ಉದಾಹರಣೆಗೆ ೧೮೯೪ ಎಂದು ಬರೆಯುವುದಕ್ಕೆ ಬದಲಾಗಿ, ೧೯ನೆಯ ಶತಮಾನದ ಕೊನೆಯ ಭಾಗ ಎಂದು ಬರೆಯುವುದು ಒಳ್ಳೆಯದು. ಆದರೆ ಸಾಮಾನ್ಯವಾಗಿ, ನೇರವಾದ ಉತ್ತರಗಳನ್ನು ಬರೆಯುವುದೇ ಒಳ್ಳೆಯದು. ಸಂದೇಹ ಇದ್ದಾಗ ಮಾತ್ರ ಈ ರೀತಿ ಉತ್ತರ ಬರೆಯಬಹುದು. •